ದಿಃ **24-07-2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ. **SPM** ವಕೀಲರವರಿಂದಃ

**01.** ಈ ಪ್ರಕರಣವನ್ನು ಮುದುಕಪ್ಪನು ದೊಡ್ಡಸಿದ್ದಪ್ಪರವರ ಮೇಲೆ ಹಾಕಿರುತ್ತಾರೆ. ಪ್ರತಿವಾದಿಯು ನನಗೆ ಚಿಕ್ಕಪ್ಪನಾಗಬೇಕು ಎಂದರೆ ಸರಿ. ದಾವಾ ಆಸ್ತೀಯನ್ನು ಬಿಟ್ಟು **1** ನೇ ವಾದಿಗೆ **20** ಎಕರೆ ಜಮೀನು ಇರುತ್ತದೆ. **1** ನೇ ವಾದಿಯವರ ತಂದೆ **40** ಸೆಂಟ್ಸ ಹೊಲ ಖರೀದಿ ಆದ ನಂತರ ತೀರಿಕೊಂಡಿರುತ್ತಾರೆ, ಸದರಿ ಖರೀದಿ ಆಗುವಾಗ ವಾದಿಯವರ ತಂದೆ ಜೀವಂತ ಇದ್ದರು. ಪ್ರತಿವಾದಿಯವರ ಹೆಂಡತಿ **40** ಸೆಂಟ್ಸ ಹೊಲ ಖರೀದಿ ಆಗಿ **3-4** ವರ್ಷಗಳ ನಂತರ ತೀರಿಕೊಂಡಿರುತ್ತಾರೆ. **1** ನೇ ವಾದಿಯವರ ತಂದೆ ತೀರಿಕೊಂಡ ನಂತರ ಅವರ ಅಣ್ಣತಮ್ಮಂದಿರ ನಡುವೆ ಹಕ್ಕು ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಯಾವಾಗ ವಾದಿಯರು ಹಕ್ಕು ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

**02.** ದಾವಾ ಆಸ್ತೀಯು ರಸ್ತೇಗೆ ಹತ್ತಿಕೊಂಡೆ ಇರುತ್ತದೆ ಎಂದರೆ ಸರಿ. ನನ್ನ ಮುಖ್ಯವಿಚಾರಣೆಯ **3** ನೇ ಖಂಡಿಕೆಯಲ್ಲಿ ಹೇಳಿದ ಹಾಗೆ ಗೋಡೌನ ಮೊದಲಿನಿಂದಲೂ ಇರುತ್ತದೆ ಎಂದರೆ ಪ್ರತಿವಾದಿಯು ಖರೀದಿ ಪಡೆದ ನಂತರ ಕಟ್ಟಿಸಿರುತ್ತಾರೆ. **2005** ರಲ್ಲಿ **1** ನೇ ವಾದಿಯು ಪ್ರತಿವಾದಿಗೆ ದಾವಾ ಆಸ್ತೀಯನ್ನು ಸಮ್ಮತಿ ಸ್ವಾಧೀನ ನೀಡಿರುತ್ತಾರೆ ಎಂದರೆ ನನಗೆ ಆವಾಗ ಕೊಟ್ಟಿರುತ್ತಾರೋ ಯಾವಾಗ ಕೊಟ್ಟಿರುತ್ತಾರೆ ಎಂದು ತಾರೀಖು ಗೊತ್ತಿರುವುದಿಲ್ಲ. ಓಲಿ ಸಿದ್ದಪ್ಪರವರು ಸ್ವಾಧೀನ ತೆಗೆದುಕೊಂಡಂತಹ ದಾವಾ ಸ್ವತ್ತನ್ನು ಕೊಡುತ್ತೇನೆ ಎಂದು ಮುಂದುಡುತ್ತಾ ಹೋಗಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ, ಸಾಕ್ಷಿಯು ಮುಂದುವರೆದು ಪ್ರತಿವಾದಿಯು ಖರೀದಿ ತೆಗೆದುಕೊಂಡ ಮೇಲೆ ಯಾಕೆ ಕೊಡುತ್ತಾರೆ. **1** ನೇ ವಾದಿ ಮತ್ತು ಅವರ ಅಣ್ಣತಮ್ಮಂದಿರಾದ **2** ಮತ್ತು **3** ನೇ ವಾದಿಯರು ವಕೀಲರ ಮುಖಾಂತರ ಪ್ರತಿವಾದಿಗೆ ಜಾಗವನ್ನು ಬಿಟ್ಟುಕೊಡಲು ನೊಟೀಸನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಂತರ ಪ್ರತಿವಾದಿಯು ದಾವಾ ಸ್ವತ್ತನ್ನು

ವಾದಿಯರಿಗೆ ಬಿಟ್ಟುಕೊಡಬೇಕಾಗುತ್ತದೆ ಎಂದು ಕ್ರಯ ಪತ್ರವನ್ನು ಹುಟ್ಟಿಸಿಕೊಂಡು ಪ್ರತಿವಾದಿಸುತ್ತಿದ್ದಾರೆ ಎಂದರೆ ಅವರು ಹಾಗೆ ಮಾಡಿರುವುದಿಲ್ಲ.

**03.** ವಾದಿಯರಾಗಲೀ ಅವರ ತಾಯಿಯಾಗಲೀ ಯಾವುದೇ ಕ್ರಯ ಕರಾರು ಪತ್ರವನ್ನು ಪ್ರತಿವಾದಿಗೆ ಬರೆದುಕೊಟ್ಟಿರುವುದಿಲ್ಲ ಎಂದರೆ ಗಂಗಮ್ಮ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆ. ನನ್ನ ಮತ್ತು ಓಲಿ ಈಶಪ್ಪರವರ**(DW.1)** ಹೊಲ ಅಕ್ಕಪಕ್ಕದಲ್ಲಿ ಇರುತ್ತವೆ ಎಂದರೆ ಸರಿ. ನನ್ನ ಹೊಲದಲ್ಲಿ ಬೋರು ಹೊಡೆಸಿರುತ್ತೇನೆ ಎಂದರೆ **2** ಬೋರು ಇರುತ್ತವೆ. ಆ ಎರಡು ಬೋರುಗಳಿಗೆ ಓಲಿ ಈಶಪ್ಪರವರ ಟಿಸಿಯಿಂದ ಕರೆಂಟ್ ತೆಗೆದುಕೊಂಡಿರುತ್ತೇನೆ ಎಂದರೆ **10-10** ಸಾವಿರ ರೂಪಾಯಿಗಳನ್ನು ಸರ್ಕಾರಕ್ಕೆ ಕೊಟ್ಟು ಕರೆಂಟನ್ನು ತೆಗೆದುಕೊಂಡಿರುತ್ತೇನೆ. ನಾನು ಉಪಯೋಗಿಸುತ್ತಿರುವ ಟಿಸಿ ಎಷ್ಟು ಕೆ.ಡಬ್ಲೂ ಇರುತ್ತದೆ ಎಂದರೆ ಅಂದಾಜು **60** ರಿಂದ **70, 100** ಇರಬಹುದು. ಟಿಸಿಯಲ್ಲಿ ಓಲಿ ಈಶಪ್ಪ ಮತ್ತು ನಾವು ಬಳಸುತ್ತೇವೆ. ಓಲಿ ಈಶಪ್ಪರವರ ಹೊಲದಿಂದ ನಮ್ಮ ಹೊಲಕ್ಕೆ **4** ಕರೆಂಟಿನ ಕಂಗಗಳು ಹೋಗಿರುತ್ತವೆ. ಸದರಿ ಟಿಸಿಯು ಓಲಿ ಈಶಪ್ಪರವರ ಹೊಲದಲ್ಲಿ ಇರುತ್ತದೆ. ಓಲಿ ಈಶಪ್ಪರವರ ಕಣದಲ್ಲಿ ಮೇವನ್ನು ಒಟ್ಟುವುದು, ಬಣವಿ ಒಟ್ಟುವುದು ಮಾಡಿರುತ್ತೇವೆ ಎಂದರೆ ನಾವು ಬರಿ ಕಾಳನ್ನು ಒಣಹಾಕಿರುತ್ತೇವೆ. ನನ್ನ ಮತ್ತು ಓಲಿ ಈಶಪ್ಪರವರ ನಡುವೆ ಹಣಕಾಸಿನ ವ್ಯವಹಾರ ಇರುವುದಿಲ್ಲ. ನನ್ನ ಮಗ ಓಲಿ ಈಶಪ್ಪರವರ **JCB Driver** ಎಂದರೆ ಸರಿ. ನಮ್ಮ ಮತ್ತು ಓಲಿ ಈಶಪ್ಪರವರ ಮನೆ ಅಕ್ಕಪಕ್ಕದಲ್ಲಿ ಇದೆ ಎಂದರೆ ಸ್ವಲ್ಪ ದೂರ ಇರುತ್ತವೆ.

**04.** ನನ್ನ ಪ್ರಮಾಣ ಪತ್ರಕ್ಕೆ ಮಾಹಿತಿ ಯಾರು ಕೊಟ್ಟಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ವಾದಿಯರು ಮತ್ತು ಅವರ ತಾಯಿ ಪ್ರತಿವಾದಿಗೆ ಕರಾರು ಪತ್ರವನ್ನು ಯಾವಾಗ ಮತ್ತು ಎಲ್ಲಿ ಮಾಡಿಕೊಟ್ಟರು ಎಂದು ನನಗೆ ಹೇಳಲು ಆಗುವುದಿಲ್ಲ. ಕರಾರು ಮಾಡುವಾಗ **1450/-**ರೂಪಾಯಿಗೆ ಒಂದು ಸೆಂಟ್ಸ ನಂತೆ **40** ಸೆಂಟ್ಸನ್ನು ಖರೀದಿ ಮಾಡುವ ಮಾತುಕತೆ ಆಗಿತ್ತು. ಮಾತುಕತೆ ಆದ ದಿನವೇ ಕ್ರಯ ಕರಾರು ಪತ್ರವನ್ನು ಸೃಷ್ಟಿ ಮಾಡಿರುತ್ತಾರೆ. ಮಾತುಕತೆ ಮಾಡುವ ಕಾಲಕ್ಕೆ **1** ನೇ ವಾದಿಯ

ತಂದೆ ಜೀವಂತ ಇದ್ದರು. ಆಗ ದಾವಾ ಸ್ವತ್ತಿನ ಪಹಣಿಯ ವಾದಿಯರ ತಂದೆಯ ಹೆಸರಿಗೆ ಇತ್ತು. ವಾದಿಯರು ಮತ್ತು ಅವರ ತಾಯಿಗೆ ದಾವಾ ಸ್ವತ್ತನ್ನು ಮಾರುವ ಅವಶ್ಯಕತೆ ಇರಲಿಲ್ಲ ಹೀಗಾಗಿ ಅವರು ಯಾವುದೇ ಕರಾರು ಪತ್ರವನ್ನು ಬರೆದು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ, ಬರೆದು ಕೊಟ್ಟಿರುತ್ತಾರೆ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದ ಹಾಗೆ ಸಿದ್ದಪ್ಪನವರ ಹೆಸರಿನಲ್ಲಿ ಪಟ್ಟಾ ಇದ್ದು ಸದರಿ ಜಮೀನು ಪಟ್ಟಾ ಬದಲಾವಣೆ ಮಾಡಿಕೊಂಡ ತಕ್ಷಣ ಕರೆದ ಸಮಯಕ್ಕೆ ಬಂದು ದಾವಾ ಜಮೀನನ್ನು ಪ್ರತಿವಾದಿಯ ಹೆಸರಿನಲ್ಲಿ ನೊಂದಣಿ ಮಾಡಿಸಿಕೊಡುತ್ತೇವೆ ಎಂದು ಒಪ್ಪಿಕೊಂಡು ವ್ಯವಹಾರ ಮಾಡಿರುತ್ತಾರೆ ಎಂದು ಬರೆಸಿದ ಹಾಗೆ ಕರಾರು ಪತ್ರ ಮಾಡುವಾಗ ನಾನು ಅಲ್ಲಿ ಉಪಸ್ಥಿತನಿರಲಿಲ್ಲ ಎಂದರೆ ನಾನು ಉಪಸ್ಥಿತನಿದ್ದೇನು. ನಾನು ಪ್ರಮಾಣ ಪತ್ರದಲ್ಲಿ ಇರುವುದು ಸತ್ಯವೋ ಈಗ ಹೇಳುತ್ತಿರುವುದು ಸತ್ಯವೋ ಎಂದರೆ ಅವತ್ತು ಕರಾರು ಆಗುವಾಗ ನಾನು ಇದ್ದೇನು.

05. ನಾನು ಒಲಿ ಈಶಪ್ಪರವರಿಗೆ ಬೇಕಾದವರು ಎಂದು ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲ.</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

"ನನ್ನ ಸಮಕ್ಷಮ"

ಓ. ಹೇ. ಕೇ. ಸರಿ ಇದೆ

**Sd/-**

(ಶ್ರೀಮತಿ ಅಕ್ಷತಾ ಟಿ.)
ದಿವಾಣಿ ನ್ಯಾಯಾಧೀಶರು,
ಹಡಗಲಿ.